ಕ್ರೈಸ್ಟ್. ಈತ ದೊರೆಯಲ್ಲ, ಬಡವ ಮತ್ತು ಕರುಣಾಳು. ಈತನ ಬಡತನ, ಈತನ ಮೇಲಾದ ಹಲ್ಲೆ, ಈತ ಕಾಣಿಸಿದ ಕರುಣೆ, ಇವುಗಳ ಸುತ್ತ ಯುರೋಪಿನ ಚಿತ್ರಕಲೆಯ ಪ್ರಭಾವವಳಿಯೊಂದು ರೂಪುಗೊಂಡಿತು. ಜನಸಾಮಾನ್ಯರು ಇಂಥ ಚಿತ್ರಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡರು. ಆದರೆ ಭಾರತದ ಚಿತ್ರಕಲೆ ಧರ್ಮ ಮತ್ತು ಚರಿತ್ರೆಯ ಬಲೆಯಲ್ಲಿ ಸಿಲುಕಿಕೊಂಡಿತು. ಕೆಲಮಟ್ಟಿಗೆ ಯುರೋಪಿನ ಚಿತ್ರಕಲೆ ಕೂಡ. ಎಲ್ಲರೂ ದೇವಾನುದೇವತೆಗಳ ಅಲೌಕಿಕ ಕ್ರಿಯೆಗಳನ್ನು ಚಿತ್ರಿಸತೊಡಗಿದರು. ಜನ ಇದನ್ನು ನಂಬತೊಡಗಿದರು. ಕೆಲ ಸಾಹಸಿ ವ್ಯಕ್ತಿಗಳನ್ನು, ಒಳ್ಳೆಯ ವ್ಯಕ್ತಿಗಳನ್ನು ನಾವು ಹೀಗೆ ಚಿತ್ರಿಸಿ ಚಿತ್ರಿಸಿ ಅವರನ್ನು ದೇವರನ್ನಾಗಿಸಿದೆವು. ಮನುಷ್ಯರು ಮತ್ತು ದೇವರುಗಳ ನಡುವೆ ಯಾರನ್ನು ಚಿತ್ರಿಸಬೇಕು ಎಂಬುದರ ಬಗ್ಗೆ ನಮ್ಮ ಚಿತ್ರಕಲಾವಿದರು ತುಂಬಾ ಒದ್ದಾಡಿದ್ದಾರೆ. ದೇವತೆಗಳ ಪವಾಡವನ್ನು ಚಿತ್ರಿಸಬೇಕೊ, ಅಥವಾ ಮನುಷ್ಯರ ದುಃಖದುಮ್ಮಾನಗಳನ್ನು ಚಿತ್ರಿಸಬೇಕೊ? ಭಾರತದ ಚಿತ್ರಕಲಾ ಪರಂಪರೆ ದೊಡ್ಡದೊಂದು ಪ್ರಮಾಣದಲ್ಲಿ ಈ ಇಕ್ಕಳದಲ್ಲಿ ಸಿಕ್ಕಿದೆ.

ಅಬ್ದುಲ್ ರೆಹಮಾನ್ ಚುಗ್ತಾಯಿ ಅಂತ ಇದ್ದರು. ಅವರು ಮೊದಲು ಭಾರತದಲ್ಲಿದ್ದರು. ಹಿಂದೂ ಪ್ರತೀಕಗಳನ್ನು ಚಿತ್ರಿಸುತ್ತಿದ್ದರು. ಕೃಷ್ಣ, ರಾಧೆ ಇತ್ಯಾದಿ. ಬೆಂಗಾಲಿ ಆರ್ಟ್ ಸ್ಕೂಲ್‌ನ ವಾಶ್ ಟೆಕ್ನಿಕ್‌ಗಳಲ್ಲಿ ಅವರು ಕೆಲಸ ಮಾಡುತ್ತಿದ್ದರು. ನಂತರ ಅವರು ಪಾಕಿಸ್ತಾನಕ್ಕೆ ಹೋದರು. ಅಲ್ಲಿ ಇಕ್ಬಾಲ್ ಕಾವ್ಯವನ್ನು ಕ್ಯಾಲಿಗ್ರಾಫಿಯಲ್ಲಿ ರೂಪಿಸಿದರು. ಯಾಕೆಂದರೆ, ಅಲ್ಲಿನ ವ್ಯಾಪಾರ ಅವರಿಂದ ಇದನ್ನೇ ಅಪೇಕ್ಷಿಸುತ್ತಿತ್ತು. ಧರ್ಮ ಮತ್ತು ಮಾರುಕಟ್ಟೆ ಅವರ ಕಲೆಯನ್ನು ವಿರುದ್ಧ ದಿಕ್ಕಿಗೆ ತಿರುಗಿಸಿಬಿಟ್ಟಿತು. ಎಂ.ಎಫ್. ಹುಸೇನ್ ಅವರು ಭಾರತದಲ್ಲಿದ್ದಾಗ ಗಣೇಶ, ಸರಸ್ವತಿ ಇತ್ಯಾದಿ ಚಿತ್ರಗಳನ್ನು ಮಾಡಿದ್ದರು. ಲಂಡನ್, ಕತಾರ್‌ಗೆ ಹೋದಾಗ ಕುರಾನ್, ಒಂಟೆ, ಖರ್ಜೂರದ ಗಿಡಗಳು ಇತ್ಯಾದಿಗಳು ಬಂದವು. ಇದು ಮಾರುಕಟ್ಟೆಯ ಅಪೇಕ್ಷೆಯಲ್ಲವೆ? ಇಲ್ಲಿ ಅವರಿಗೆ ಹಿಂದೂ ದೇವತೆಗಳನ್ನು ಚಿತ್ರಿಸಲು ನಾವು ಬಿಡಲಿಲ್ಲ. ಅಲ್ಲಿ ಕುರಾನ್ ಅಂಶಗಳು ಒಳಗೊಳ್ಳುವಂತೆ ಅವರು ಪ್ರಭಾವಿಸಿದರು. ಹೀಗಾದಾಗ ಒಬ್ಬ ನಿಜವಾದ ಕಲಾವಿದ ಯಾವ ಚಿತ್ರಗಳನ್ನು ಬಿಡಿಸಬೇಕು? ಅವರು ಮದರ್ ಥೆರೇಸಾ ಚಿತ್ರ ಬಿಡಿಸಿದರು. ಇದು ಅವರು ಇಷ್ಟಪಟ್ಟು ಬಿಡಿಸಿದ್ದೆ? ಇಲ್ಲ, ಖಂಡಿತಾ ಇಲ್ಲ. ಅವರು ಯುರೋಪಿನ ಜನರ ಪ್ರೀತಿ ಗಳಿಸಬೇಕಿತ್ತು. ಅವರಿಗೆ ನೈಪುಣ್ಯತೆ ಇತ್ತು. ಆ ನೈಪುಣ್ಯತೆ ಮಾರುಕಟ್ಟೆಯಿಂದ ಪ್ರಭಾವಿತಗೊಂಡಿತ್ತು. ಒಂದು ವೇಳೆ ಮಾರುಕಟ್ಟೆಯೇ ಎಲ್ಲವನ್ನೂ ನಿರ್ಧರಿಸತೊಡಗಿದಾಗ ಕಲೆ ಉಳಿಯುವುದೇ? ಇವೆಲ್ಲವುಗಳ ಮಧ್ಯೆಯೂ ಬಿಡಿಸಿಕೊಂಡು ಬದುಕುವುದನ್ನು ಕಲಿಯಬೇಕಲ್ಲವೆ? ರಜಾಸಾಬ್ ಅವರ ಬಿಂದುಗಳ ಪೇಂಟಿಂಗ್‌ಗಳಿವೆ. ಆದರೆ ಈ ಬಿಂದುಗಳನ್ನೇ ಇಟ್ಟುಕೊಂಡು ನೀವು ನೂರಾರು ಪೇಂಟಿಂಗ್‌ಗಳನ್ನು ಹೇಗೆ ಮಾಡುವಿರಿ? ಯಾಕೆಂದರೆ, ಮಾರುಕಟ್ಟೆಯಲ್ಲಿ ನಿಮ್ಮ ಈ ಪ್ರಾಡಕ್ಟ್ ಯಶಸ್ಸು ಕಂಡಿದೆ. ಹೀಗಾಗಿ ನೀವು ಅದರ ಒತ್ತಡಕ್ಕೆ ಒಳಗಾಗಿದ್ದೀರಿ ಅಂತಲೇ ಅರ್ಥ. ಧರ್ಮ ಮತ್ತು ರಾಷ್ಟ್ರೀಯತೆಯ ಮುಷ್ಟಿಯಲ್ಲಿದ್ದ ಕಲೆ ಈಗ ಮಾರುಕಟ್ಟೆಯ ಮುಷ್ಟಿಯಲ್ಲಿದೆ. ಕಾರಣ, ಧರ್ಮ ಮತ್ತು ರಾಷ್ಟ್ರೀಯತೆ ಕೂಡ ಮಾರುಕಟ್ಟೆಯ ಪ್ರಭಾವಕ್ಕೆ ಒಳಗಾಗಿವೆ. ರಾಷ್ಟ್ರೀಯ ಮಾರುಕಟ್ಟೆ ಇಲ್ಲವೆ ಅಂತರರಾಷ್ಟ್ರೀಯ ಮಾರುಕಟ್ಟೆ. ಮಾರುಕಟ್ಟೆಗಳೇ ಕಲೆಯನ್ನು ನಿಯಂತ್ರಿಸತೊಡಗಿವೆ. ಮಾರುಕಟ್ಟೆಗೆ ಎಷ್ಟು ಶಕ್ತಿ ಇದೆಯೆಂದರೆ ಅದು ಮಣ್ಣನ್ನೂ ಚಿನ್ನ ಮಾಡಬಲ್ಲದು. ಅದು ಏನು ಬೇಕಾದರೂ ಮಾಡಬಹುದು. ಅದು ಪ್ರಭುತ್ವಗಳನ್ನು ಬದಲಾಯಿಸಬಹುದು. ಹಿಂದೆಲ್ಲ ಪಾಲಿಯೆಸ್ಟರ್ ಬಟ್ಟೆಯನ್ನು ಯಾರಾದರೂ ಉಟ್ಟುಕೊಳ್ಳುತ್ತಾರೆಂದರೆ ಅವರು ಶ್ರೀಮಂತರು ಮಾತ್ರ. ಖಾದಿ ಬಡವರದು. ಆದರೆ ಈಗ ನೋಡಿ, ಎಲ್ಲರೂ ಪಾಲಿಯೆಸ್ಟರ್ ಬಟ್ಟೆ ತೊಡುತ್ತಾರೆ. ಖಾದಿ ತೊಡುವುದು ಈಗ ಶ್ರೀಮಂತರ ಫ್ಯಾಶನ್ ಆಗಿದೆ. ವಿಮಾನದ ಬಿಜಿನೆಸ್ ಕ್ಲಾಸ್‌ನಲ್ಲಿ ಕೂಡುವವರು ಖಾದಿ ತೊಡುತ್ತಾರೆ. ಖಾದಿಯಲ್ಲಿ ಬಗೆಬಗೆಯ ಡಿಸೈನ್‌ಗಳು ಬಂದಿವೆ. ಅದೇ ರಿಕ್ಷಾ ನಡೆಸುವವರು ಪಾಲಿಯೆಸ್ಟರ್ ತೊಡುತ್ತಾರೆ. ಮಾರುಕಟ್ಟೆಯ ಈ ಕುತಂತ್ರವನ್ನು ಒಡೆಯುವ ಶಕ್ತಿ ಕೇವಲ ಕಲೆಗೆ ಇದೆ. ಆದರೆ ಕಲಾವಿದರೇ ಮಾರುಕಟ್ಟೆಯಲ್ಲಿ ಮಾರಾಟವಾಗತೊಡಗಿದರೆ ಏನು ಹೇಳುವುದು? ಮಾರುಕಟ್ಟೆಗೆ ಕೆಲವು ನಿಯಮಗಳಿವೆ. ಉದಾಹರಣೆಗೆ, ಯುನಿಕ್ ಸೆಲ್ಲಿಂಗ್ ಪ್ರೊಗ್ರೆಶನ್ (ಯುಎಸ್‌ಪಿ).